ಗ್ಲಾಸು ಖಾಲಿಯಾಗಿದೆ ಎಂದು ಅರ್ಥ. ಇದನ್ನು ಈಗಾಗಲೇ ಗಮನಿಸಿರುವ ಹಿಮದರ್ಶನದ ಮ್ಯಾನೇಜರು ವಿನ್ಸೆಂಟ್ ಇನ್ನೊಂದು ಗ್ಲಾಸಲ್ಲಿ ಸುರಿದುಕೊಂಡು ಬರಬೇಕು. ಇದು ಅವರು ಮಾಡಿರುವ ವ್ಯವಸ್ಥೆ.

ಬಾರದಿದ್ದರೆ, 'ಏ ಇವನೇ. ಥೂ ಇವನ ಹೆಸರೇ ಮರೆತು ಹೋಗಿದೆ. ಚಾಸರ್ ' ಎಂದು ಜೋರಾಗಿ ಕೂಗುತ್ತಾರೆ. ಅದು ವಿನ್ಸೆಂಟರಿಗೆ ಇವರು ಇಟ್ಟಿರುವ ನೂರಾರು ಹೆಸರುಗಳಲ್ಲಿ ಒಂದು. ಯೇಟ್ಸ್, ಕೀಟ್ಸ್, ಜಾನ್ಸನ್, ಎಲಿಯಟ್, ಹೀಗೆ ಇನ್ನೂ ಹತ್ತಾರು ಹೆಸರುಗಳೂ ವಿನ್ಸೆಂಟರಿಗೆ ಇವೆ. ವಯಸ್ಸಾದ ವಿನ್ಸೆಂಟರು ಪ್ರಾಚೀನ ಆಂಗ್ಲ ಕವಿ ಚಾಸರನ ಹಾಗೆ ಬಂದು ಇವರ ಎದುರು ವಿನೀತನಾಗಿ ನಿಂತುಕೊಳ್ಳುತ್ತಾರೆ.

'ಓ ಚಾಸರಾ. ನನಗೆ ಇನ್ನೊಂದು ಇದನ್ನೇ ಮರುಕಳಿಸು' ಎಂದು ಇನ್ನೊಂದು ಪೆಗ್ ವಿಸ್ಕಿ ತರಲು ಹೇಳುತ್ತಾರೆ.

'ಈ ಅಮ್ಮನಿಗೆ ಮತ್ತು ಗಂಡನಿಗೆ ಇನ್ನೊಂದು ತಾಜಾ ಹಣ್ಣಿನ ರಸ.'

ವಿಲಾಸಿನಿಯೂ ಗಂಡನೂ ಹೊರಡಲು ಅಪ್ಪಣೆ ಪಡೆದು ಹೊರಡುತ್ತಾರೆ. ಊರಲ್ಲಿ ಹಸುವೊಂದು ಗಬ್ಬಕ್ಕೆ ಬಂದಿದೆಯಂತೆ. ಕೃತಕ ವೀರ್ಯಧಾರಣೆ ಮಾಡಬೇಕಂತೆ.

'ಕೃತಕ ಎಂತಕ್ಕೆ? ಈ ಸಾಹೇಬರನ್ನು ಬಳಸಿಕೊಳ್ಳಬಹುದಲ್ಲಾ' ಚಾರುದತ್ತರು ನನ್ನನ್ನೊಮ್ಮೆ ವಿಲಾಸಿನಿಯನ್ನೊಮ್ಮೆ ನೋಡಿ ಗಹಗಹಿಸಿ ಮತ್ತೆ ಎದ್ದು ನಿಲ್ಲುತ್ತಾರೆ.

ಇದನ್ನು ನೋಡಿದ ಹಿಮದರ್ಶನದ ಮ್ಯಾನೇಜರ್ ವಿನ್ಸೆಂಟರು ಆ ವಾರದಲ್ಲಿ ಖಾಲಿಯಾದ ಎರಡು ಮೂರು ಕಲಾತ್ಮಕ ಮದ್ಯದ ಶೀಷೆಗಳನ್ನು ಪುಟ್ಟ ಚೀಲದ ಸಮೇತ ಶೇಷಪ್ಪನವರಿಗೆ ಒಪ್ಪಿಸುತ್ತಾನೆ.

ಟೇಬಲ್ಲಿನ ಮೇಲಿರುವ ನಿಂಬೆಯ ಹೋಳಿಗೆ ಒಂದಿಷ್ಟು ಉಪ್ಪು ಉದುರಿಸಿ ಅದನ್ನು ನೆಕ್ಕಿ ಮುಖ ಹುಳಿಹುಳಿ ಮಾಡಿಕೊಂಡ ವಿಲಾಸಿನಿ ಕಣ್ಣಂಚಲ್ಲೇ ನಕ್ಕು ಗಂಡ ಶೇಷಪ್ಪನವರ ತೋಳೊಳಗೆ ಕೈಕೋಸಿ ಇಬ್ಬರೂ ಮಧ್ಯಾಹ್ನದ ಎಳೆಬಿಸಿಲಲ್ಲಿ ಮಾಯವಾಗುತ್ತಾರೆ.

'ಇಕಾ ನೋಡು ಇವಳು ಕಪ್ಪು ಕನ್ನಡಕ ಮತ್ತೆ ಮರೆತಳು' ಚಾರುದತ್ತರು ವಿನ್ಸೆಂಟರಿಗೆ ಅದನ್ನು ತೆಗೆದಿರಿಸಲು ಹೇಳುತ್ತಾರೆ.

'ಬನ್ನಿ ಚಾರುದತ್ತರೇ ಒಂದು ಚೂರು ಕೈಲಾಸ ದರ್ಶನ ಮಾಡಿಕೊಂಡು ಬರೋಣಾ...' ತೂರಾಡತೊಡಗಿರುವ ಅವರನ್ನು ಎಬ್ಬಿಸಿ ನಾನೂ ಒಂಚೂರು ವಾಲಾಡುತ್ತಾ ಇಬ್ಬರೂ ಹೋಟೆಲಿನ ಹಿಂಭಾಗದ ಬೆಟ್ಟ ಸಾಲಿನ ತುದಿಯಲ್ಲಿ ನಿಂತುಕೊಳ್ಳುತ್ತೇವೆ.

ಭಾನುವಾರದ ಆಲಸ್ಯಕರ ಮಧ್ಯಾಹ್ನ. ಕಣ್ಣಿಗೆ ರಾಚುವ ಹಸಿರು ಮತ್ತು ಹಿತವಾದ ಬಿಸಿಲು. ಎಲ್ಲೆಲ್ಲಿಂದಲೋ ಪ್ರವಾಸಿಗಳಾಗಿ ಬಂದ ಯುವಜೋಡಿಗಳು ಕೈಗೆ ಕೈಕೋಸಿಕೊಂಡು. ತಲೆ ತಗ್ಗಿಸಿಕೊಂಡು, ಇನ್ನೇನು ಶುರುಮಾಡಿಯೇ ಬಿಡುತ್ತಾರೆ ಎನ್ನುವ ಹಾಗೆ ಯದ್ವಾತದ್ವಾ ಒಬ್ಬರ ಒಳಗೆ ಇನ್ನೊಬ್ಬರು ಹರಡಿಕೊಂಡು ಕುಳಿತಿದ್ದಾರೆ.

'ಛೇ ಎಂತ ಸಾವು ಮಾರಾಯ. ಈ ವಯಸಿನಲ್ಲೂ ಇಂದ್ರಿಯ ನಿಗ್ರಹ ಎಷ್ಟು ಕಷ್ಟ!' ಎಂದು ವಿಷಣ್ಣರಾಗಿ ನಕ್ಕು ಸ್ವೆಟರು ಧರಿಸಿದ ತಮ್ಮ ಖಾದಿ ಕುರ್ತಾದ ಪ್ಯಾಂಟಿನ ಜೇಬಿನೊಳಕ್ಕೆ ಕೈಹಾಕಿ ನಿಟ್ಟುಸಿರು ಬಿಡುತ್ತಾರೆ.

'ವಿಲಾಸಿನಿ ತುಂಬಾ ಜೋರಿದ್ದಾಳಲ್ಲವಾ' ಅವರ ಬಾಯಿಂದ ಅವಳ ಹೆಸರೂ ಬರುತ್ತದೆ.

'ಜೋರು ಮಾತ್ರ ಅಲ್ಲ, ಚಂದವೂ ಇದ್ದಾಳೆ' ನಾನು ಸೇರಿಸುತ್ತೇನೆ.

'ಅವಳ ಸಂಗ ತುಂಬ ಚಂದವಿರಬಹುದಲ್ಲವಾ? ಆದರೆ, ಏನು ಮಾಡುವುದು ಕಂಪೌಂಡರನ